# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ ಐವಾನ-ಷಾಹಿ ಬಡಾವಣೆ ಕಲಬುರಗಿ

**ಸಂಖ್ಯೆ: ಸಿ7(4)ಯೋ/ಓಓಎಸ್‌ಸಿ/ಅನುಷ್ಠಾನ/04/2018-19** **ದಿನಾಂಕ: 25-11-2019**

**ಸುತ್ತೋಲೆ**

**ವಿಷಯ:** 2019-20ನೇ ಸಾಲಿಗೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲು ಕಾರ್ಯತಂತ್ರಗಳನ್ನು/ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ರವರ ಆದೇಶ ಸಂಖ್ಯೆ:ಹೈಕಪ್ರಮಂ/ಯೋಶಾ/ಕ್ರಿಯೋ/RF/01/2019-20 ದಿನಾಂಕ: 13-09-2019.

************

2019-20ನೇ ಸಾಲಿಗೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲು ಕಾರ್ಯತಂತ್ರಗಳನ್ನು/ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು, 6-14 ವಯೋಮಾನದ ಎಲ್ಲಾ ಮಕ್ಕಳನ್ನು ಕಡ್ಡಾಯವಾಗಿ ದಾಖಲಾತಿ ಮಾಡಿಕೊಂಡು ಉಚಿತ ಶಿಕ್ಷಣ ನೀಡುವುದು, ಇಲಾಖೆಯ ಆದ್ಯ ಕರ್ತವ್ಯವಾಗಿದೆ. ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತಂದು ಅವರು ನಿರಂತರವಾಗಿ ಶಿಕ್ಷಣ ಮುಂದುವರೆಸಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹಾಗೂ ನಿರಂತರ ಮೇಲ್ವಿಚರಣೆ ವ್ಯವಸ್ಥೆ ರೂಪಿಸಿ ಯಾವುದೇ ಮಗುವೂ ಶಾಲೆಯಿಂದ ಹೊರಗುಳಿಯದಂತೆ ಕ್ರಮವಹಿಸುವುದು ಇಲಾಖೆಯ ಜವಾಬಾರಿಯಾಗಿದೆ, ಮಕ್ಕಳ ಸಮೀಕ್ಷೆಯಿಂದ ಕಲಬುರಗಿ ವಿಭಾಗದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ (6 ರಿಂದ 13+) 5708, ಆಗಿರುತ್ತದೆ. ವಿಭಾಗದ ಜಿಲ್ಲಾ ಉಪನಿರ್ದೇಶಕರು ಮತ್ತು ಉಪಯೋಜನಾ ಸಮನ್ವಯಾಧಿಕಾರಿಗಳು ವಿವಿಧ ಕಾರ್ಯತಂತ್ರಗಳ ಮುಖಾಂತರ ಶಾಲಾ ಶಿಕ್ಷಣದ ಮೂಖ್ಯವಾಹಿನಿಗೆ ತರಲು ಕ್ರಿಯಾಯೋಜನೆಯನ್ನು ತಯಾರಿಸಿದ್ದಾರೆ.

## ಕಾರ್ಯಕ್ರಮದ ವಿವರಣೆ

ಕಲಬುರಗಿ ವಿಭಾಗದ 06 ಜಿಲ್ಲೆಗಳಲ್ಲಿ ಒಟ್ಟು 5708 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು, ಇವುಗಳಲ್ಲಿ 03 ಜಿಲ್ಲೆಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿರವರ ವತಿಯಿಂದ 1645 ಮಕ್ಕಳಿಗೆ ವಿವಿಧ ಕಾರ್ಯತಂತ್ರದ ಮೂಲಕ ಮುಖ್ಯವಾಹಿನಿಗೆ ತರಲು ಈ ಕೆಳಕಂಡತೆ ಕ್ರಿಯಾಯೋಜನೆ ತಯಾರಿಸಲಾಗಿದೆ. ಬಳ್ಳಾರಿ,ಬೀದರ ಮತ್ತು ಯಾದಗಿರಿ ಈ 03 ಜಿಲ್ಲೆಗಳಲ್ಲಿ, ಕ್ರಮವಾಗಿ 711, 146 ಮತ್ತು 788 ಒಟ್ಟು 1645 ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ರವರಿಂದ ಅನುದಾನ ಬಿಡುಗಡೆಯಾಗಿರುತ್ತದೆ.

ಕಲಬುರಗಿ ಜಿಲ್ಲೆಯ 2441 ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಹಮ್ಮಿಕೊಂಡ ಕಾರ್ಯಕ್ರಮಕ್ಕೆ ರಾಜ್ಯ ಕಛೇರಿಯಿಂದ ಅನುದಾನ ಬಿಡುಗಡೆಯಾಗಿರುತ್ತದೆ. ಆದ್ದರಿಂದ ಈ ಕೆಳಗಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯತಂತ್ರಗಳ ವಿವರ ಈ ಕೆಳಕಂಡಂತಿದೆ.

ಕಲಬುರಗಿ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ 2441 ಮ್ಕಕಳನ್ನು ಮುಖ್ಯವಾಹಿನಿಗೆ ತರಲು ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ 12 ತಿಂಗಳ ವಸತಿಯುತ ವಿಶೇಷ ತರಬೇತಿ (12 ತಿಂಗಳ ವಸತಿಯುತ ವಿಶೇಷ ತರಬೇತಿ (12 RST) ಕಾರ್ಯತಂತ್ರದ ಮೂಲಕ 729 ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಮಗ್ರ ಶಿಕ್ಷಣ ಕರ್ನಾಟಕ (SSK) ಬೆಂಗಳೂರದಿಂದ ಅನುದಾನ ರೂ.1,45,80000/- ಮಂಜೂರು ಆಗಿರುತ್ತದೆ.

ಈಗಾಗಲೇ 06 ತಿಂಗಳು ಮುಗಿದಿರುವುದರಿಂದ ಅದರಲ್ಲಿ ಉಳಿತಾಯವಾಗುವ ಹಣವನ್ನು 06 ತಿಂಗಳ ಋತುಮಾನ ವಸತಿಯುತ ಕೇಂದ್ರ (SRST) ಅಡಿಯಲ್ಲಿ 614 ಮಕ್ಕಳನ್ನು ಮುಖ್ಯವಾಹಿನಿಗೆ, ಮತ್ತು ಉಳಿದ ಮಕ್ಕಳನ್ನು 816 ಎಸ್,ಬಿ,ಟಿ ಮೂಲಕ, 123 ಬಿಸಿಎಮ್ , 106 ಸಮಾಜ ಕಲ್ಯಾಣ ಹಾಸ್ಟೆಲ್ ಮತ್ತು 53 ಮಕ್ಕಳನ್ನು ಕೆ.ಜಿ.ಬಿ.ವಿ ಗೆ ಸೇರಿಸಲು ಆಯಾ ಹಂತದಲ್ಲಿ ಯೋಜನೆ ಹಾಕಿಕೊಂಡಿರುತ್ತಾರೆ.

ಕೊಪ್ಪಳ ಮತ್ತು ರಾಯಚೂರ ಜಿಲ್ಲೆಯಲ್ಲಿ ಅನುಕ್ರಮವಾಗಿ 239 ಹಾಗೂ 502 ಮಕ್ಕಳಿದ್ದು ಅವರನ್ನು ಪಾರಂಪರಿಕ ವಿಧಾನದ ಮೂಲಕ ಮುಖ್ಯವಾಹಿನಿಗೆ ತರಲಾಗುವದೆಂದು ಸಂಬಂಧಿಸಿದ ಉಪನಿರ್ದೇಶಕರುಗಳು ಕಾರ್ಯತಂತ್ರವನ್ನು ಅಳವಡಿಸಿಕೊಂಡಿರುತ್ತಾರೆ, ಪ್ರತಿವಾರವೂ ತಮ್ಮ ಕೇಂದ್ರಗಳಲ್ಲಿರುವ ಮಕ್ಕಳನ್ನು ಮುಖ್ಯವಾಹಿನಿಗೆ ಬಂದ ಕುರಿತು ಮಾಹಿತಿಯನ್ನು spread sheet ನಲ್ಲಿ ಕಡ್ಡಾಯವಾಗಿ ಅಳವಡಿಸಲು ಸೂಚಿಸಲಾಗಿದೆ. ಮತ್ತು ಮಾಹಿತಿ ಹಿಮ್ಮಾಹಿತಿ ಕಾರ್ಯಾಗಾರದಲ್ಲಿ ಪ್ರಗತಿ ಪರಶೀಲಿಸಲಾಗುತ್ತಿದೆ.

**ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ವತಿಯಿಂದ 2019-20ನೇ ಸಾಲಿನ ಶಾಲೆಯಿಂದ ಹೊರಗುಳಿದ ಮ್ಕಕಳನ್ನು ಮುಖ್ಯವಾಹಿನಿಗೆ ತರಲು ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಒಳಪಡುವ ಮಕ್ಕಳ ಹಾಗೂ ತಗಲುವ ಅನುದಾನದ ಮಾಹಿತಿ**

| ಕ್ರಮ ಸಂಖ್ಯೆ | ಜಿಲ್ಲೆ | ಕಾರ್ಯಕ್ರಮಕ್ಕೆ ಒಳಪಡುವ ಮಕ್ಕಳ ಸಂಖ್ಯೆ | ತಗಲುವ ಒಟ್ಟು ಅನುದಾನ | ಷರಾ |
|---|---|---|---|---|
| 1 | ಬಳ್ಳಾರಿ | 711 | 4266000/- | |
| 2 | ಬೀದರ | 146 | 514000/- | |
| 3 | ಯಾದಗಿರಿ | 788 | 4728000/- | |
| | **ಒಟ್ಟು** | **1645** | **9508000/-** | |

**1. ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕಸಹಿತ) (6 ತಿಂಗಳ ಅವಧಿಗೆ)**

- 2017-18ನೇ ಸಾಲಿಗೆ ಎಂ.ಹೆಚ್.ಆರ್.ಡಿ ವತಿಯಿಂದ ಒಂದು ಜನ ವಸತಿ ಪ್ರದೇಶದಲ್ಲಿ/ಶಾಲಾ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ 6 ರಿಂದ 25 ಇದ್ದಲ್ಲಿ. ಅಂತಹ ಕಡೆ ಒಬ್ಬರು ಸ್ವಯಂ ಸೇವಕರನ್ನು ನಿಯೋಜಿಸಿಕೊಳ್ಳಲು 6 ತಿಂಗಳ ಅವಧಿಗೆ ಒಂದು ಮಗುವಿಗೆ ರೂ.6000 ಘಟಕ ವೆಚ್ಚವನ್ನು ನಿಗದಿಪಡಿಸಿದೆ.
  **(ಕ್ರಮ: ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಮುಖ್ಯಗುರುಗಳು)**
- ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪಿ.ಯು.ಸಿ/ಡಿ.ಎಡ್ ತರಬೇತಿ ಹೊಂದಿರುವ ಒಬ್ಬ ನಿರುದ್ಯೋಗಿ ವ್ಯಕ್ತಿಯನ್ನು ಸ್ವಯಂ ಸೇವಕರನ್ನಾಗಿ ಎಸ್.ಡಿ.ಎಂ.ಸಿ ಮುಖ್ಯಗುರುಗಳು ನೇಮಕ ಮಾಡುವುದು ಅವರಿಗೆ, ಈಗಾಗಲೇ ಗುರುತಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಹಾಗೂ ಮಕ್ಕಳ ಕಲಿಕಾ ಕೊರತೆಗಳ ಬಗ್ಗೆ ಹಾಗೂ ವಿಶೇಷ ತರಬೇತಿಗಾಗಿ ಉಪಯೋಗಿಸಬಹುದಾದ ಸಾಹಿತ್ಯದ ಬಗ್ಗೆ ತರಬೇತಿ ನೀಡುವುದು. ಸ್ವಯಂ ಸೇವಕರಿಗೆ ಶಿಕ್ಷಕರ ಕೈಪಿಡಿ ನೀಡುವುದು.
  **(ಕ್ರಮ: ಅಪರ ಆಯುಕ್ತರು ಮತ್ತು ಉಪನಿರ್ದೇಶಕರು)**

- ಮಕ್ಕಳಿಗೆ ಶಾಲೆಯಲ್ಲೇ ಕಲಿಕೆಯ ಪರಿಸರವನ್ನು ಸೃಷ್ಟಿಸಿ ಸ್ವಯಂ ಸೇವಕರ ಸಹಾಯದೊಂದಿಗೆ ಕಲಿಕಾ ಪ್ರಗತಿಯನ್ನು ಹೆಚ್ಚಿಸುವುದು.
  **(ಕ್ರಮ: ಮುಖ್ಯಗುರುಗಳು ಮತ್ತು ಸ್ವಯಂ ಸೇವಕರು)**
- ತರಗತಿಗಳಲ್ಲಿ ಮಕ್ಕಳು ದಾಖಲಾದ ಮೇಲೆ ಸ್ವಯಂ ಸೇವಕರನ್ನು ಬಿಡುಗಡೆಗೊಳಿಸಿ ಸ್ವತ: ಶಿಕ್ಷಕರೇ ಈ ಮಕ್ಕಳ ಕಲಿಕೆಯ ಪ್ರಕ್ರಿಯೆಯನ್ನು ಕಾಲಕಾಲಕ್ಕೆ ಖಾತ್ರಿಪಡಿಸಿಕೊಳ್ಳಬೇಕು. ಕೊರತೆಗಳಿದ್ದರೆ ಅದನ್ನು ತಾವೇ ಬಗೆಹರಿಸಿಕೊಳ್ಳಬೇಕು.
  **(ಕ್ರಮ: ಮುಖ್ಯಗುರುಗಳು ಮತ್ತು ಸ್ವಯಂ ಸೇವಕರು)**
- ಈ ಕೇಂದ್ರಗಳಿಗೆ ನುರಿತ ಮತ್ತು ಪ್ರಸ್ತುತ ಕೆಲಸದಲ್ಲಿ ಅನುಭವ ಇರುವ ಶಿಕ್ಷಕರನ್ನು ನಿಯೋಜಿಸುವುದು.
  **(ಕ್ರಮ: ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯಗುರುಗಳು)**
- ಒಂದು ಕೇಂದ್ರದಲ್ಲಿ 25 ಮಕ್ಕಳಿರುವಂತೆ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.
  **(ಕ್ರಮ: ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯಗುರುಗಳು)**
- ಮಧ್ಯಾಹ್ನದ ಊಟವನ್ನು ಉಪಹಾರ ಯೋಜನೆಯಡಿ ಭರಿಸುವುದು.
  **(ಕ್ರಮ: ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯಗುರುಗಳು)**

**ಘಟಕ ವೆಚ್ಚದ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.**

**ಅನುಬಂಧ-01**

**ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕಸಹಿತ) (6 ತಿಂಗಳ ಅವಧಿಗೆ)**

| ಕ್ರ ಸಂ. | **ಚಟುವಟಿಕೆಗಳ ವಿವರ** | **ಘಟಕ ವೆಚ್ಚ** |
|---|---|---|
| 1 | ಸ್ವಯಂ ಸೇವಕರಿಗೆ ಗೌರವ ಸಂಭಾವನೆ (ಕನಿಷ್ಠ ರೂ,6000 ಮತ್ತು ಗರಿಷ್ಟ ರೂ 8000 ಸಂಭಾವನೆ) | 1500 |
| 2 | ಸ್ನ್ಯಾಕ್ಸ್ | 1000 |
| 3 | ಲೇಖನ ಸಾಮಗ್ರಿ (ಮಗುವಿಗೆ) | 300 |
| 4 | ಟಿಎಲ್ಎಂ | 1200 |
| 5 | ಕೇಂದ್ರದ ಸಾದಿಲ್ವಾರು | 200 |
| 6 | ದಾಖಲೀಕರಣ | 350 |
| 7 | ವೈದ್ಯಕೀಯ ತಪಾಸಣೆ | 300 |
| 8 | ಫೋಟೊ ಐಡಿ | 50 |
| 9 | ಪೋಷಕರ ಸಭೆ | 300 |
| 10 | ಶೈಕ್ಷಣಿಕ ಪ್ರವಾಸ | 500 |
| 11 | ತರಬೇತಿ | 300 |
| | **ಒಟ್ಟು ರೂ,** | **6000** |

**ವಿಶೇಷ ಸೂಚನೆ:**

1) ಶಿಕ್ಷಕರ ಕಲಿಕಾ ಸಾಮಾಗ್ರಿಗಳು (ಟಿ.ಎಲ್.ಎಂ) ಪಟ್ಟಿ ಪ್ರತ್ಯೇಕವಾಗಿ ಈ ಪತ್ರಕ್ಕೆ ಲಗತ್ತಿಸಿದೆ. ಈ ಕುರಿತು ರಾಜ್ಯ ಯೋಜನಾ ನಿರ್ದೇಶನಾಲಯದ ಸುತ್ತೋಲೆಯ ಮೂಲ ಆಶಯಕ್ಕೆ ಚ್ಯುತಿ ಬಾರದಂತೆ ಕೆಲವೊಂದು ಸಣ್ಣ ಪುಟ್ಟ ಮಾರ್ಪಾಡಗಳನ್ನು ಮಾಡಲಾಗಿದೆ.

2) ಪ್ರವಾಸ:

ತಾಲೂಕಿನ ಪ್ರೇಕ್ಷಣೆಯ ಸ್ಥಳಗಳು, ವಿಜ್ಞಾನ ಕೇಂದ್ರಗಳು, ಪೋಲಿಸ್ ಸ್ಟೇಶನ್, ಗ್ರಂಥಾಲಯ, ಪಾರ್ಕ ಮತ್ತು ಗ್ರಾಮ ಪಂಚಾಯತಿಯನ್ನು ಭೇಟಿಯಾಗಿ ಅವಲೋಕಿಸುವುದು.

**2) 3 ತಿಂಗಳ ವಸತಿಸಹಿತ ವಿಶೇಷ ತರಬೇತಿ (3 ಆರ್‌ಎಸ್‌ಟಿ) ಮತ್ತು 3 ತಿಂಗಳ ವಸತಿರಹಿತ ವಿಶೇಷ ತರಬೇತಿ (3ಎನ್‌ಆರ್‌ಎಸ್‌ಟಿ)**

ಈ ಕಾರ್ಯತಂತ್ರ/ಚಟುವಟಿಕೆ ಅನುಷ್ಠಾನಕ್ಕೆ ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಅಭಿಯಾನ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಸಶಿಅ/ಒಒಎಸ್‌ಸಿ/AWP&B/ಸುತ್ತೋಲೆ/ 2018-19, ದಿನಾಂಕ:28-06-2018 ರಲ್ಲಿ ವಿವರವಾಗಿ ಕಾರ್ಯತಂತ್ರ ಅನುಷ್ಠಾನಗೊಳಿಸುವ ಕುರಿತು ಮಾಹಿತಿಯನ್ನು ನೀಡಲಾಗಿದೆ. ಘಟಕ ವೆಚ್ಚ ಹೆಚ್ಚಿರುವ ಹಿನ್ನೆಲೆಯಲ್ಲಿ, 3 ತಿಂಗಳ ವಸತಿ ಸಹಿತ ತರಬೇತಿಗೆ ರೂ, 5000 ರಿಂದ ರೂ, 7000 ಅನುದಾನ ಹೆಚ್ಚಿಸಿದೆ ಹಾಗೂ 3 ತಿಂಗಳ ವಸತಿ ಸಹಿತ ತರಬೇತಿಗೆ ರೂ.1500 ರಿಂದ ರೂ.3000 ಅನುದಾನ ಹೆಚ್ಚಿಸಿರುವ ಸಂಬಂಧ ಈ ಕೆಳಕಂಡ ಕೋಷ್ಟಕಗಳಲ್ಲಿ ನೀಡಿರುವ ಚಟುವಟಿಕೆವಾರು ಅನುದಾನ ನಿಗದಿಪಡಿಸಿದಂತೆ (activity wise breakup) ಅನುಷ್ಠಾನಗೊಳಿಸುವುದು ಹಾಗೂ ಪ್ರಗತಿ ವಿವರಗಳನ್ನು ನೀಡಲಾದ ನಮೂನೆಯಲ್ಲಿ ಸಲ್ಲಿಸಲು ತಿಳಿಸಿದೆ.

**ಅನುಬಂಧ-02**

**ಘಟಕ ವೆಚ್ಚದ ಮರು ಹಂಚಿಕೆ**

| ಘಟಕ ವೆಚ್ಚದ ಹಂಚಿಕೆ(ಪ್ರತಿ ಮಗುವಿನ ಘಟಕ ವೆಚ್ಚ 3 ತಿಂಗಳ ಅವಧಿಗೆ) | | | |
|---|---|---|---|
| ಕ್ರ ಸಂಖ್ಯೆ | ವಿವರ | ವಸತಿ ರಹಿತ ಚಿಣ್ಣರ ಅಂಗಳ (ಪ್ರತಿ ಮಗುವಿಗೆ) | ವಸತಿ ಸಹಿತ ಚಿಣ್ಣರ ಅಂಗಳ (ಪ್ರತಿ ಮಗುವಿಗೆ) |
| 1 | ಸ್ವಯಂ ಸೇವಕರ ಗೌರವಧನ (ಒಬ್ಬರಿಗೆ ಮಾಸಿಕ ಕನಿಷ್ಟ ರೂ, 500) (ವಸತಿ ರಹಿತ ಕೇಂದ್ರಕ್ಕೆ-ಒಬ್ಬರು, ವಸತಿ ಸಹಿತ ಕೇಂದ್ರಕ್ಕೆ-ಇಬ್ಬರು ಸ್ವಯಂ ಸೇವಕರು) | 600 | 1000 |
| 2 | ಉಪಾಹಾರ/ಊಟ (ದಿನಕ್ಕೆ 2 ಊಟ, 1 ಉಪಹಾರ ಹಾಗೂ ಸ್ನಾಕ್ಸ್) | | |
| 3 | ಲಘು ಉಪಹಾರ ಹಾಗೂ ಸ್ನಾಕ್ಸ್ (ಮಧ್ಯಾಹದ ಬಿಸಿಯೂಟ ಒದಗಿಸುವುದು) | 0 | 3200 |
| 4 | ಲೇಖನ ಸಾಮಗ್ರಿ (ಪೆನ್,ಪೆನ್ಸಿಲ್,ಕ್ರಯಾನ್ಸ್,ರಬ್ಬರ್,ಜಾಮಿಟ್ರಿ ಬಾಕ್ಸ್, 6ನೋಟ್ ಬುಕ್ (100 ಪುಟಗಳು) | 1000<br>150 | 0<br>300 |
| 5 | ಕಲಿಕೆ ಬೋಧನೆ ಸಾಮಗ್ರಿ (ಚಾರ್ಟ್ಸ್‌ಗಳು,ಮಾದರಿಗಳು ಇತ್ಯಾದಿ) | | |
| 6 | ಸಹಾಯಕರು | 100 | 200 |
| 7 | ದೈನಂದಿನ ವಸ್ತುಗಳು (ಸೋಪು,ಕೊಬ್ಬರಿಎಣ್ಣೆ,ತಟ್ಟೆ,ಲೋಟ,ಮಗ್,ಬಕೇಟು,ಬ್ಯಾಗ್,ಸ್ಲಪ್ಪರ್ಸ್(1 ಜೊತೆ) | 0<br>0 | 500<br>300 |
| 8 | ಜಮಖಾನ ಮತ್ತು ಬೆಡ್-ಶೀಟ್ | | |
| 9 | ಸಾದಿಲ್ವಾರು | 0 | 250 |
| 10 | ಪ್ರವಾಸ (Field trip) | 150 | 200 |
| 11 | ವೈದ್ಯಕೀಯ ತಪಾಸಣೆ | 150 | 150 |
| 12 | ಯುನಿಫಾರ್ಮ್ 1 ಜೊತೆ | 300 | 300 |
| 13 | ಫೋಟೋ ID ಕಾರ್ಡ್ | 0 | 300 |
| 14 | ದಾಖಲೀಕರಣ | 50 | 50 |
| 15 | ವಿಶೇಷ ತರಬೇತಿ ಸಾಹಿತ್ಯ ಮುದ್ರಣಕ್ಕಾಗಿ | 100 | 50 |
| | | 400 | 200 |
| | ಒಟ್ಟು | **3000** | **7000** |

**ಆಧಾರ:** ದಿನಾಂಕ: 28-06-2018ರ ರಾಜ್ಯ ಯೋಜನಾ ನಿರ್ದೇಶಕರ ಸಮಗ್ರ ಶಿಕ್ಷಣ ಅಭಿಯಾನ ಬೆಂಗಳೂರು. ರವರ ಸುತ್ತೋಲೆ.

ಯಾದಗಿರಿ, ಕಲಬುರಗಿಯಲ್ಲಿ ಅಜೀಮ್ ಪ್ರೇಮಜಿ ಫೌಂಡೇಷನ್ ರವರು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆ ತರುವ ಕಾರ್ಯ ತಂತ್ರದ ಪ್ರಗತಿ ಪರಿಶೀಲನೆಯ ಮೇಲು ಉಸ್ತವಾರಿ ವಹಿಸಲಿದ್ದಾರೆ.

ಬೀದರನಲ್ಲಿ ಅಗಸ್ತ್ಯ ಫೌಂಢೇಶನ್ ರವರು ಅಪರೇಶನ್ 'ವಸಂತ' ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು ಉಪ ನಿರ್ದೇಶಕರು ವಸಂತ ಕಾರ್ಯಕ್ರಮದ ಮೂಲಕ ಅಗಸ್ತ್ಯ ಫೌಂಢೇಶನ್ ಸಹಕಾರ ಪಡೆಯುವಂತೆ ಸೂಚಿಸಿಲಾಗಿದೆ. ಈ ಕಾರ್ಯಕ್ಕೆ ಶಿಕ್ಷಕರ ಕಲಿಕಾ ಕೇಂದ್ರ (TLC) ಗಳ ನೆರವನ್ನು ಪಡೆಯಬಹುದು.

**<u>ಸ್ವಯಂ ಸೇವಕರಿಗೆ ಪ್ರಶಂಸಾ ಪತ್ರ</u>**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ಸ್ವಯಂ ಸೇವಕರನ್ನು ಬಳಸಿಕೊಳ್ಳಲಾಗಿದ್ದು. ಸದರಿ ಸ್ವಯಂ ಸೇವಕರು ಮಕ್ಕಳನ್ನು ಮುಖ್ಯ ವಾಹಿನಿಗೆ ಸೇರ್ಪಡೆಗೊಳಿಸುವಲ್ಲಿ ಸಂಖ್ಯಾವಾರು ಸಾಧನೆಯನ್ನು ಆಧರಿಸಿ ಸೂಕ್ತ ರೀತಿಯಲ್ಲಿ ಗೌರವಿಸಲಾಗುವುದು. ಮತ್ತು ನಮ್ಮ ಕಛೇರಿಯಿಂದ ಪ್ರಶಂಸೆ ಪತ್ರವನ್ನು ನೀಡಲಾಗುತ್ತದೆ. ಸರ್ಕಾರದ ವಯಸ್ಕರ ಶಿಕ್ಷಣ ಇಲ್ಲವೆ ಇತರೆ ಕಾರ್ಯಕ್ರಮದಲ್ಲಿ ಬಳಸಿಕೊಳ್ಳಲು ಕ್ರಮವಹಿಸಲಾಗುವುದು.

**<u>ಪರಿಶೀಲನಾ ವ್ಯವಸ್ಥೆ:</u>**

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಲಭ್ಯವಿರುವ ಮೇಲುಸ್ತುವಾರಿ ಸಿಬ್ಬಂದಿಯನ್ನು ಬಿ.ಇ.ಓ, ಬಿ.ಆರ್.ಸಿ, ಇ.ಸಿ.ಓ, ಬಿ.ಆರ್.ಪಿ, ಹಾಗೂ ಸಿ.ಆರ್.ಪಿ, ರವರ ನಿರಂತರ ಹಾಗೂ ಕಡ್ಡಾಯವಾಗಿ ಶಾಲೆಯಿಂದ ಹೊರಗುಳಿದ ಮಕ್ಕಳ ಕಲಿಕಾ ಕೇಂದ್ರ ಹಾಗೂ ಸ್ವಯಂ ಸೇವಕರ ಮೇಲೆ ನಿಗಾ ಇಡುವಂತೆ ಮತ್ತು ಸೂಕ್ತ ಮಾರ್ಗದರ್ಶನ ಹಾಗೂ ಪ್ರೇರಣೆ ನೀಡುವಂತೆ ತಿಳಿಸಿದೆ. ಎಲ್ಲ ಸಿಬ್ಬಂದಿಗಳ ದೂರವಾಣಿ ಸಂಖ್ಯೆ ಸಂಗ್ರಹಿಸಿ ವಾಟ್ಸಪ್ ಮೂಲಕ ನೈಜ ಚಿತ್ರಗಳನ್ನು ಗ್ರೂಪದಲ್ಲಿ ಕಳುಹಿಸುವಂತೆ ಸೂಚಿಸಿದೆ.

**<u>ಮೌಲ್ಯ ಮಾಪನ:</u>**

ಪ್ರತಿ ತಿಂಗಳು ಕೊರತೆ ಇರುವ ಸಾಮರ್ಥ್ಯಗಳ ಪ್ರಗತಿ ಹಾಗೂ ಗಳಿಸಿದ ಕುರಿತು ನಿರಂತರ ಮೌಲ್ಯಮಾಪನ ಮಾಡಿ ಅವರ ಕಲಿಕೆಯ ಮೇಲೆ ನಿಗಾ ಇಡುವುದು ಮತ್ತು ಅಗತ್ಯತೆಗಳಿಗನುಸಾರವಾಗಿ ಕಾರ್ಯತಂತ್ರ ಮತ್ತು ಕಲಿಕೆಯ ಗತಿಯಲ್ಲಿ ಬದಲಾವಣೆ ಮಾಡಿಕೊಳ್ಳಲಾಗುವುದು.

**<u>ದಾಖಲೀಕರಣ:</u>**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಅವರ ವಯಸ್ಸು ಮತ್ತು ಓದುತ್ತಿರುವ ತರಗತಿಗಳಿಗೆ ಅನುಸಾರವಾಗಿ ಆರಂಭದಲ್ಲಿ ಪೂರ್ವ ಪರೀಕ್ಷೆ ನಡೆಸುವುದರ ಮೂಲಕ ಸಾಮರ್ಥ್ಯಗಳ ಕೊರತೆ ಪತ್ತೆಹಚ್ಚಿ ಅವುಗಳನ್ನು ಗಳಿಸಿಕೊಂಡಿರುವ ಕುರಿತು ನಿರಂತರ ದಾಖಲೆ ನಿರ್ವಹಿಸುವುದು. ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಕಡತ (child profile) ನಿರ್ವಹಿಸಿ ಅದರಲ್ಲಿ ಅವನ ವೈಯಕ್ತಿಕ ವಿವರ, ಭಾವ ಚಿತ್ರ ತರಬೇತಿ ಅವಧಿಯ ಸಂಪೂರ್ಣ ಹಾಜರಾತಿ ವಿವರ, ಮೌಲ್ಯಮಾಪನ ವಿವರ ನಮೂದಿಸುವುದು. ಕಾಲಕಾಲಕ್ಕೆ ಮೇಲಾಧಿಕಾರಿಗಳು ಬಂದಾಗ ಸಾದರ ಪಡಿಸುವುದು. ಇವುಗಳನ್ನು ಪರಿಶೀಲಿಸಿದ ನಂತರ ದಾಖಲೀಕರಣ ಮಾಡಿ ಪರಿಶೀಲನೆಗೆ ಕಾಯ್ದಿರಿಸಲು ಮುಖ್ಯಗುರುಗಳ ನೇರವಿನಿಂದ ಸ್ವಯಂ ಸೇವಕರಿಗೆ ತಿಳಿಸಲಾಗಿದೆ.

NM

ತರಬೇತಿ

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಹಮ್ಮಿಕೊಂಡ ಕಾರ್ಯಕ್ರಮಕ್ಕೆ ಜಿಲ್ಲೆವಾರು ನಿಯೋಜನೆ ಮಾಡಿಕೊಂಡಿರುವ ಸ್ವಯಂ ಸೇವಕರಿಗೆ ಅಜೀಮ್ ಪ್ರೇಮಜಿ ಫೌಂಢಶೇನ್ ಪಟ್ಟಣ ಕ್ರಾಸ್ ಆಳಂದ ರಸ್ತೆ ಕಲಬುರಗಿ. ರವರ ಸಹಯೋಗದೊಂದಿಗೆ, ದಿನಾಂಕ:26.11.2019 ರಿಂದ 27.11.2019ರ ವರೆಗೆ (ಎರಡು ದಿನಗಳು) ವಸತಿ ಸಹಿತ ತರಬೇತಿಯನ್ನು ಆಯುಕ್ತಾಲಯದ ವತಿಯಿಂದ ನೀಡಲಾಗಿದೆ,

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವತಿಯಿಂದ ಅನುದಾನ ನೀಡಲಾಗುತ್ತಿರುವ ಮೂರು ಜಿಲ್ಲೆಗಳಾದ ಬಳ್ಳಾರಿ, ಬೀದರ, ಹಾಗು ಯಾದಗಿರ ಜಿಲ್ಲೆಯ ಕಾರ್ಯಕ್ರಮದ ಅನುಷ್ಠಾನ ಅಧಿಕಾರಿಗಳಿಗೆ ಮೇಲಿನಂತೆ ಕ್ರಮ ಜರುಗಿಸಲು ತಿಳಿಸುತ್ತಾ ತೆಗೆದು ಕೊಂಡ ಕ್ರಮಗಳನ್ನು ದಾಖಲಿಸುವಂತೆ ಸೂಚಿಸಿದೆ.

ಈ ಸುತ್ತೋಲೆಯನ್ನು ಮತ್ತು ಇತರೆ ಅನುಷ್ಠಾನ ಕಾರ್ಯತಂತ್ರ ಕುರಿತಾದ ವಿವರಗಳನ್ನು ನಮ್ಮ ಕಛೇರಿಯ http://cpigulbarga.kar.nic.in/oosc.aspx/ ವೆಬ್ ಸೈಟ್‌ನಲ್ಲಿ ನೋಡಬಹುದಾಗಿದೆ.

(ನಲಿನ್ ಅತುಲ್ ಭಾ.ಆ.ಸೇ)
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

ಪ್ರತಿಗಳನ್ನು:

1) ವಿಭಾಗದ ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ಅಗತ್ಯ ಕ್ರಮಕ್ಕಾಗಿ.
2) ವಿಭಾಗದ ಎಲ್ಲಾ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು (ಡಿವೈಪಿಸಿ) ಸಮಗ್ರ ಶಿಕ್ಷಣ ಕರ್ನಾಟಕ ಅಗತ್ಯ ಕ್ರಮಕ್ಕಾಗಿ.
3) ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

ಗೌರವ ಪೂರ್ವಕವಾಗಿ

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ & ಪ್ರೌಢ (ಶಿಕ್ಷಣ ಇಲಾಖೆ) ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರ ಮಾಹಿತಿಗಾಗಿ.
2) ಮಾನ್ಯ ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಇವರ ಮಾಹಿತಿಗಾಗಿ.
3) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
4) ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ರವರ ಮಾಹಿತಿಗಾಗಿ ಹಾಗೂ ತಮ್ಮ ಪ್ರವಾಸದ ಸಂಧರ್ಭದಲ್ಲಿ ಇಂತಹ ಶಾಲೆಗಳಿಗೆ ಭೇಟಿ ನೀಡಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಪರಿವೀಕ್ಷಣೆ ಮೇಲುಸ್ತುವಾರಿ ನಡೆಸುವಂತೆ ಕೋರಿದೆ. ವಿವರಗಳನ್ನು http://cpigulbarga.kar.nic.in/oosc.aspx/ ವೆಬ್ ಸೈಟ್‌ನಲ್ಲಿ ಲಭ್ಯವಿದೆ.